**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.884-2014**

**ಪಿ.ಡಬ್ಲ್ಯೂ: 18**

**ಸಿ.ಡಬ್ಲ್ಯೂ: 18**

ಸಾಕ್ಷಿದಾರರ **ಹೆಸರು** : ಕುಮಾರ

ತಂದೆಯ **ಹೆಸರು** : ಅಣ್ಣಾಮಲೈ

**ವಯಸ್ಸು** : **56 ವರ್ಷ**

**ಉದ್ಯೋಗ** : ವ್ಯವಸಾಯ

**ವಾಸಸ್ಥಳ** : ಬಾವಿಕೆರೆ

**ದಿನಾಂಕ: 09-11-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪೀಡಬ್ಲ್ಯು **18** ರವರು ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರಾಗಿರುತ್ತಾರೆ.

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

**2011** ರಲ್ಲಿ ನಾನು ಪಂಚಾಯ್ತಿಯ ಸದಸ್ಯನಾಗಿದ್ದೆ. ಆರೋಪಿ ಕೆಲಸ ಮಾಡುತ್ತಿದ್ದ ಬ್ಯಾಂಕಿನಲ್ಲಿ ನನ್ನ ಖಾತೆ ಇತ್ತು. ನ್ಯಾಯಾಲಯದ ಮುಂದಿರುವ ಆರೋಪಿಯು ಕಾವೇರಿ ಗ್ರಾಮೀಣ ಬ್ಯಾಂಕಿನ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ದಿ: **26-02-2013** ರಂದು ಆರೋಪಿ ನನ್ನ ಬಳಿ ಬಂದು ನನಗೆ ಹಣದ ಅವಶ್ಯಕತೆ ಇದೆ, ನಾನು ಬ್ಯಾಂಕಿನಲ್ಲಿ ಬಂಗಾರದ ಆಭರಣಗಳನ್ನು ಒತ್ತೆ ಇಟ್ಟು ನನ್ನ ಹೆಸರಿನಲ್ಲಿ ಸಾಲ ಪಡೆಯಲು ಬರುವುದಿಲ್ಲ, ಆದ್ದರಿಂದ ನಿಮ್ಮ ಹೆಸರಿನಲ್ಲಿ ಬಂಗಾರದ ಆಭರಣಗಳನ್ನು ಒತ್ತೆ ಇಟ್ಟು ಸಾಲ ಪಡೆಯುತ್ತೇನೆಂದು ನನಗೆ ತಿಳಿಸಿ ನನ್ನ ಸಹಿಯನ್ನು ಚೆಕ್ಕಿಗೆ ಪಡೆದಿರುತ್ತಾರೆ. ನಾನು ಆರೋಪಿ ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ದಿ: **28-06-2013** ರಂದು ಚಿಕ್ಕಮಗಳೂರಿನಿಂದ ಬ್ಯಾಂಕಿನ ಮುಖ್ಯ ಮ್ಯಾನೇಜರ್ ರವರು ಬಂದು ನಮ್ಮೆನ್ನೆಲ್ಲಾ ಬ್ಯಾಂಕಿಗೆ ಕರೆಸಿ ವಿಚಾರಣೆ ಮಾಡಿದರು. ಆರೋಪಿಯು ನಮ್ಮಿಂದ ಸಹಿ ಪಡೆದು ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ತಿಳಿಸಿದರು. ನಾನು ನಕಲಿ ಬಂಗಾರವನ್ನು ಇಟ್ಟು ಹಣ ಪಡೆದಿರುವೆ ಎಂದು ತಿಳಿಸಿದಾಗ ನಾನು ಮೋಸ ಮಾಡಿಲ್ಲ, ಬ್ಯಾಂಕಿನ ಮ್ಯಾನೇಜರ್ ಆದ ಆರೋಪಿಯು ನಂಬಿಕೆ ಮೇಲಿಂದ ನನ್ನ ಸಹಿ ಪಡೆದು ನನ್ನ ಹೆಸರಿನಂ ನಕಲಿ ಬಂಗಾರವನ್ನು ಇಟ್ಟು ಸಹಿ ಪಡೆದಿದ್ದಾರೆಂದು ತಿಳಿಸಿದೆನು. ಆಗ ಪೋಲೀಸರು ಹಾಗೂ ಮ್ಯಾನೇಜರ್ ರವರು ನನ್ನ ಸಹಿ ಪಡೆದು

ಕೋರ್ಟಿಗೆ ಕರೆದಾಗ ಬರಬೇಕೆಂದು ತಿಳಿಸಿದರು. ನಾನು ನನ್ನ ಹೇಳಿಕೆಯಲ್ಲಿ ನನಗೆ ಆದ ರೀತಿ ಪುಟ್ಟಸ್ವಾಮಿ, ಸುರೇಶ, ಉಮೇಶ, ನಿಂಗಪ್ಪ, ಮಹಿಳೆಯರು ಇದ್ದು, ಅವರ ಹೆಸರು ಗೊತ್ತಿಲ್ಲ. ಬ್ಯಾಂಕಿನ ಮ್ಯಾನೇಜರ್ ಆದಂತಹ ಆರೋಪಿ ಬ್ಯಾಂಕಿಗೆ ವಂಚನೆ ಮಾಡಿರುವುದು ಗೊತ್ತಾಯ್ತು.

***<u>ಪಾಟೀ ಸವಾಲು : ಆರೋಪಿ ಪರ</u>*** <u>ಶ್ರೀ ಎಂ ಕೆ ಟಿ</u> ***<u>ವಕೀಲರಿಂದ.</u>***

ನಾನು ಸುಮಾರು ***18*** ವರ್ಷಗಳಿಂದ ಬ್ಯಾಂಕಿನ ವ್ಯವಹಾರ ಮಾಡುತ್ತಿದ್ದೇನೆ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ ದಿನಾಂಕ ಈಗ ನೆನಪಿಲ್ಲ. ಬ್ಯಾಂಕಿನ ಮ್ಯಾನೇಜರ್ ರವರು ಬಂದು ನಮಗೆ ತಿಳಿಸಿದ ಮೇಲೆ ಬ್ಯಾಂಕಿನಲ್ಲಿ ನಡೆದ ವ್ಯವಹಾರದ ಬಗ್ಗೆ ಗೊತ್ತಾಗಿರುತ್ತದೆಂದರೆ ಸರಿ. ಬ್ಯಾಂಕಿನಲ್ಲಿ ಆರೋಪಿತರು ಯಾವ ರೀತಿಯ ದಾಖಲೆಗಳನ್ನು ಬರೆದಿಟ್ಟಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಪುಟ್ಟಸ್ವಾಮಿ, ಸುರೇಶ, ಉಮೇಶ, ನಿಂಗಪ್ಪ, ರವರ ಎಷ್ಟು ಹಣಕ್ಕೆ ಖಾತೆ ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಹೆಸರಿನಲ್ಲಿ ಆರೋಪಿ ಬ್ಯಾಂಕಿನಲ್ಲಿ ಖಾತೆ ತೆರೆದು ಹಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಹೆಸರಿನಲ್ಲಿ ಎಷ್ಟು ಬಂಗಾರವನ್ನು ಒತ್ತೆ ಇಟ್ಟಿದ್ದರು, ಎಷ್ಟು ಹಣವನ್ನು ಪಡೆದಿದ್ದಾರೆಂದು ನನಗೆ ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***<u>ಮರುವಿಚಾರಣೆ:</u> ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***